# ● ಸುದ್ದಿ ಸಂಚಯ ●

## ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ – ನೆರೆ ಪರಿಹಾರ ಕಾರ್ಯದ ೧೦.೦೭.೨೦೦೭ರ ತನಕ ವರದಿ

ಪಶ್ಚಿಮ ಬಂಗಾಳ, ಗುಜರಾತ್ ಹಾಗೂ ಒರಿಸ್ಸಾ ರಾಜ್ಯಗಳಲ್ಲಿ ಅತಿ ವೃಷ್ಟಿಯಿಂದ ತೀವ್ರ ಹಾನಿಯುಂಟಾಗಿದ್ದು ಲಕ್ಷಾಂತರ ಕುಟುಂಬಗಳು ಬೀದಿ ಪಾಲಾಗಿವೆ. ಈ ರಾಜ್ಯಗಳಲ್ಲಿ ರಾಮಕೃಷ್ಣ ಮಿಷನ್ ವ್ಯಾಪಕ ನೆರೆ ಪರಿಹಾರ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ವಿವರಗಳು ಈ ಕೆಳಗಿನಂತಿವೆ:





**ಪಶ್ಚಿಮ ಬಂಗಾಳ:** ಹೂಗ್ಲಿ ಜಿಲ್ಲೆಯ ಮಾಯಲ್ ಇಚ್ಛಾಪುರ್ ಹಾಗೂ ಖಾನಕುಲ್ ಜಿಲ್ಲೆಗಳಲ್ಲಿ, ಪಶ್ಚಿಮ ಮೇದಿನೀಪುರದ ಘಾಟಾಲ್ ಹಾಗೂ ನಾರಾಯಣಗಡ್ ಜಿಲ್ಲೆಗಳಲ್ಲಿ ಹಾಗೂ ಪೂರ್ವ ಮೇದಿನೀಪುರದ ಪತಾಶ್‌ಪುರ್ ಜಿಲ್ಲೆಗಳಲ್ಲಿ ಊಟದ ಪೊಟ್ಟಣ, ಅವಲಕ್ಕಿ, ಸಕ್ಕರೆ, ಬಿಸ್ಕತ್ತು, ಮೋಂಬತ್ತಿ, ಹ್ಯಾಲೋಜನ್ ಗುಳಿಗೆಗಳು ಮುಂತಾದ ಆವಶ್ಯಕ ವಸ್ತುಗಳನ್ನು ಸಾವಿರಾರು ನೆರೆಪೀಡಿತ ಕುಟುಂಬಗಳಿಗೆ ನೀಡ ಲಾಗುತ್ತಿದೆ. ಹೌರಾ ಜಿಲ್ಲೆಯ ಉದಯ ನಾರಾಯಣಪುರದಲ್ಲೂ ಅಕ್ಕಿ ಹಾಗೂ ಬೇಳೆಯನ್ನು ವಿತರಿಸಲಾಗುತ್ತಿದೆ. ಪಶ್ಚಿಮ ಮೇದಿನೀಪುರದ ಸಾಬಾರಿಗ್ ಹಾಗೂ ಪಿಂಗ್ಲಾ ಹಳ್ಳಿಗಳಲ್ಲೂ ಊಟದ ಪೊಟ್ಟಣಗಳನ್ನು ನೀಡಲಾಗುತ್ತಿದೆ.

**ಒರಿಸ್ಸಾ:** ಜೈಪುರ ಜಿಲ್ಲೆಯ ಪನಸಾ, ಬಿಂಧನಾ ಹಾಗೂ ಮೋಟುರಂಗಪಾಲ್ ಹಳ್ಳಿಗಳಲ್ಲಿ ನೆರೆಗೆ ಸಿಲುಕಿರುವ ಸಾವಿರಾರು ಕುಟುಂಬಗಳಿಗೆ ಅವಲಕ್ಕಿ, ಸಕ್ಕರೆ, ಮಸಾಲೆ ಪದಾರ್ಥಗಳು, ಮೋಂಬತ್ತಿ, ಬೆಂಕಿಪೊಟ್ಟಣಗಳನ್ನು ನೀಡಲಾಗುತ್ತಿದೆ.

**ಗುಜರಾತ್:** ಜಾಮ್‌ನಗರ್ ಹಾಗೂ ಸುರೇಂದ್ರನಗರ್ ಜಿಲ್ಲೆಗಳಲ್ಲಿ ನೂರಾರು ಪ್ರವಾಹಪೀಡಿತ ಕುಟುಂಬಗಳಿಗೆ ಒಣ ಆಹಾರ ಪದಾರ್ಥ, ಗೋಧಿಹಿಟ್ಟು, ಖಾದ್ಯತೈಲ, ಸಂಬಾರ ಪದಾರ್ಥ, ತರಕಾರಿ, ಟಾರ್ ಪಾಲ್ ಹೊದಿಕೆ, ಕಂಬಳಿ ಇತ್ಯಾದಿಗಳನ್ನು ನೀಡಲಾಗುತ್ತಿದೆ. ಉಳಿದ ಪ್ರದೇಶಗಳ ಸಂತ್ರಸ್ತರಿಗೂ ಪರಿಹಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗು ತ್ತಿದೆ. ಅಲ್ಲಿಂದ ಇನ್ನೂ ವರದಿಗಳು ಬರ ಬೇಕಾಗಿದೆ.

ಈ ಮಾನವ ಪ್ರೀತಿಯ ಪರಿಹಾರ ಕಾರ್ಯಕ್ಕಾಗಿ ನಿಮ್ಮ ದೇಣಿಗೆಯನ್ನು ನಗದು ಅಥವಾ ಚೆಕ್/ ಡಿ.ಡಿ. ಮೂಲಕ "Ramakrishna Mission" ಎಂದು ನಮೂದಿಸಿ, ಕಲ್ಕತ್ತೆಯಲ್ಲಿ ಸಂದಾಯ ವಾಗುವಂತೆ ನೀಡಬಹುದಾಗಿದೆ. ಈ ದೇಣಿಗೆಗೆ ವರಮಾನ ತೆರಿಗೆ 80-G ಅನ್ವಯ ರಿಯಾಯಿತಿ ಇರುತ್ತದೆ. ದಯ ಮಾಡಿ ನಿಮ್ಮ ದೇಣಿಗೆಯನ್ನು ಈ ವಿಳಾಸಕ್ಕೆ ಕಳಿಸಿರಿ:

**ಪ್ರಧಾನ ಕಾರ್ಯದರ್ಶಿ, ರಾಮಕೃಷ್ಣ ಮಿಶನ್,**
**ಬೇಲೂರು ಮಠ, ಹೌರಾ, (ಪಶ್ಚಿಮ ಬಂಗಾಳ) –711 202**
**ಫೋನ್:26549581/ 9681: ಫ್ಯಾಕ್ಸ್ :2654 9885;**
e-mail: rkmrelief @gmail.com. web-site: www.belurmath.org/relief

**ಸ್ವಾಮಿ ಪ್ರಭಾನಂದ**
(ಪ್ರಧಾನ ಕಾರ್ಯದರ್ಶಿ)

---

## ಒಂದು ಲಕ್ಷ ಪ್ರಸಾರ ಸಂಖ್ಯೆ ದಾಟಿದ ರಾಮಕೃಷ್ಣ ವಿಜಯಂ

**ರಾಮಕೃಷ್ಣ** ಮಹಾಸಂಘದ ತಮಿಳು ಮಾಸಪತ್ರಿಕೆ **ರಾಮಕೃಷ್ಣ ವಿಜಯಂ** ಇತ್ತೀಚೆಗೆ ಒಂದು ಲಕ್ಷ ಪ್ರಸಾರ ಸಂಖ್ಯೆಯನ್ನು ಹೊಂದಿ ವಿಕ್ರಮವನ್ನು ಸ್ಥಾಪಿಸಿತು. ಕಳೆದ ೮೭ ವರ್ಷಗಳಿಂದ ಚೆನ್ನೈನ ರಾಮಕೃಷ್ಣ ಮಠವು ಪ್ರಕಟಿಸುತ್ತಿರುವ ಈ ಪತ್ರಿಕೆಗೆ ಇದೊಂದು ಅಭೂತಪೂರ್ವ ಸಂದರ್ಭ. ಇದರ ಅಂಗವಾಗಿ ಚೆನ್ನೈನ ವಿವೇಕಾನಂದ ನಿಲಯದ ಪಕ್ಕದ ಮೈದಾನದಲ್ಲಿ ರಾಮಕೃಷ್ಣ ವಿಜಯಂ ಪತ್ರಿಕೆಯ ವಿಶೇಷ ಸಂಚಿಕೆಯ ಬಿಡುಗಡೆಯ ಕಾರ್ಯಕ್ರಮವನ್ನು ಜುಲೈ ೨೨ರಂದು ಆಯೋಜಿಸಲಾಗಿತ್ತು. ಸುಮಾರು ೮,೦೦೦ಕ್ಕೂ ಹೆಚ್ಚು ಪತ್ರಿಕೆಯ ಅಭಿಮಾನಿಗಳು ಮತ್ತು ಭಕ್ತರು ನೆರೆದಿದ್ದರು. ಪತ್ರಿಕೆಯ ಸಂಪಾದಕರಾದ ಸ್ವಾಮಿ ವಿಮೂರ್ತಾನಂದಜಿ ಅವರು ಎಲ್ಲರನ್ನೂ ಸ್ವಾಗತಿಸುತ್ತ, ದಿವ್ಯತ್ರಯರ ಸಂದೇಶ ಸಾಗರದ ಒಂದು ಬಿಂದುವೇ ಈ ಪತ್ರಿಕೆ ಎಂದು ನುಡಿದರು. ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು "ರಾಮಕೃಷ್ಣ ವಿಜಯಂ ಪತ್ರಿಕೆಯು ಒಂದು ಮನೆಗೆ ತಲುಪಿತೆಂದರೆ, ಮನೆಯವರು ಶ್ರೀರಾಮಕೃಷ್ಣರೇ ಮನೆಗೆ ಬಂದಂತೆ ಭಾವಿಸುತ್ತಾರೆ. ಹೀಗೆ ಪ್ರಭಾವಶಾಲಿಯಾದ ರೀತಿಯಲ್ಲಿ ದಿವ್ಯತ್ರಯರ ಚಿರಂತನ ಸಂದೇಶಗಳನ್ನು ಮತ್ತು ಸಮಾಜಕ್ಕೆ ಆವಶ್ಯಕವಾದ ಉನ್ನತ ಮೌಲ್ಯಗಳನ್ನು ಪತ್ರಿಕೆ ಎಲ್ಲರಿಗೂ ತಲುಪಿಸುತ್ತಿದೆ. ಬರುವ ವರ್ಷಗಳಲ್ಲಿ ಇದು ಇನ್ನೂ



ಸ್ವಾಮಿ ಗೌತಮಾನಂದಜಿಯವರಿಂದ ವಿಶೇಷ ಸಂಚಿಕೆಯ ಬಿಡುಗಡೆ

ಅಭಿವೃದ್ಧಿ ಹೊಂದಲಿ ಎನ್ನುವುದೇ ನಮ್ಮೆಲ್ಲರ ಪ್ರಾರ್ಥನೆ" ಎಂದು ನುಡಿದರು. ಪತ್ರಿಕೆಯ ಹಿಂದಿನ ಸಂಪಾದಕರಾದ ಸ್ವಾಮಿ ಕಮಲಾತ್ಮಾನಂದಜಿ ಅವರು ಪತ್ರಿಕೆಯ ಯಶಸ್ಸು ಶ್ರೀರಾಮಕೃಷ್ಣರ ಮಹಿಮೆಯ ದ್ಯೋತಕ ಎಂದು ಹೇಳಿದರು. ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜ್ಞಾನದಾನಂದಜಿ ಅವರು ಭಗವಂತನು ಮತ್ಸ್ಯಾವತಾರದಲ್ಲಿ ಸಣ್ಣ ಪ್ರಮಾಣದಿಂದ ಬೃಹದಾಕಾರವಾಗಿ ಬೆಳೆದಂತೆ, ಪತ್ರಿಕೆ ಇಂದು ಬೆಳೆದಿದೆ ಎಂದು ಪ್ರಶಂಸಿಸಿ, ಮತ್ತೂ ಹಲವು ಲಕ್ಷಗಳ ಗಡಿಯನ್ನು ರಾಮಕೃಷ್ಣ ವಿಜಯಂ ದಾಟಲಿ ಎಂದು ಆಶಿಸಿದರು.

## ಬೆಂಗಳೂರಿನ ರಾಮಕೃಷ್ಣ ವೃತ್ತದಲ್ಲಿ ಸ್ವಾಮಿ ವಿವೇಕಾನಂದರ ಭವ್ಯ ಮೂರ್ತಿ – ಅಡಿಗಲ್ಲು ಸಮಾರಂಭ

**ಬೆಂ**ಗಳೂರಿನ ಶ್ರೀರಾಮಕೃಷ್ಣ ಮಠದ ಎದುರಿಗಿನ ರಾಮಕೃಷ್ಣ ವೃತ್ತದಲ್ಲಿ ಸ್ವಾಮಿ ವಿವೇಕಾನಂದರ ಭವ್ಯ ಕಂಚಿನ ಮೂರ್ತಿಯನ್ನು ನಿಲ್ಲಿಸುವ ಯೋಜನೆ ರೂಪುಗೊಂಡಿದೆ. ಇದರ ಅಂಗವಾಗಿ, ಜುಲೈ ತಿಂಗಳ ದಿನಾಂಕ ೨೯ರ ಬೆಳಗ್ಗೆ ೧೦ ಗಂಟೆಗೆ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ಬೆಂಗಳೂರು ಮಠದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿಯವರ ಉಪಸ್ಥಿತಿಯಲ್ಲಿ ಶಂಕುಸ್ಥಾಪನೆಯನ್ನು ನೆರವೇರಿಸಿದರು. ವೃತ್ತದಲ್ಲಿನ ಅಡಿಗಲ್ಲು ಸ್ಥಾಪನೆಯು ಮುಗಿಯುತ್ತಿದ್ದಂತೆ ಆಶ್ರಮದ ಸಭಾಮಂಟಪದಲ್ಲಿ ಸಮಾರಂಭ ನಡೆಯಿತು. ಪರಮಪೂಜ್ಯ ಸ್ವಾಮಿ ಜಪಾನಂದಜಿ ಎಲ್ಲರನ್ನೂ ಸ್ವಾಗತಿಸಿ ಈ ಕಾರ್ಯಕ್ಕೆ ನೆರವಾದವರನ್ನೆಲ್ಲ ಕೃತಜ್ಞತೆಯಿಂದ ಸ್ಮರಿಸಿದರು. ನಂತರ ಮಾತನಾಡಿದ 'ನಿವೃತ್ತ ನ್ಯಾಯಮೂರ್ತಿ ಶ್ರೀಯುತ ಎಂ.ಎನ್. ವೆಂಕಟಾಚಲಯ್ಯನವರು ಮೂರ್ತಿಯ ಅಡಿಗಲ್ಲು ಸಮಾರಂಭದ ಔಚಿತ್ಯವನ್ನು ಸಮರ್ಥವಾಗಿ ಮನವರಿಕೆ ಮಾಡಿಕೊಟ್ಟರು. ಕನ್ನಡದ ಖ್ಯಾತ ಸಾಹಿತಿಗಳಾದ ಪ್ರೊಫೆಸರ್ ಎಲ್.ಎಸ್. ಶೇಷಗಿರಿರಾಯರು ವಿವೇಕಾನಂದರ ಮತ್ತು ಕರ್ನಾಟಕದ ಸಂಬಂಧಗಳನ್ನು ಮೆಲುಕು ಹಾಕಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರಿನಲ್ಲಿ ಸ್ಥಾಪನೆಯಾಗಲು ಸ್ವಾಮಿ ವಿವೇಕಾನಂದರೇ ಕಾರಣ ಎಂಬುದನ್ನು



ರಾಜ್ಯಪಾಲರಿಂದ ಶಂಕುಸ್ಥಾಪನೆ, ಎಡದಿಂದ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಜಪಾನಂದಜಿ

ಹೆಮ್ಮೆಯಿಂದ ಹೇಳಿದರು. ನಿವೃತ್ತ ನ್ಯಾಯಮೂರ್ತಿ ಡಾ. ರಾಮಾ ಜೋಯಿಸ್ ಅವರು ಈ ಯೋಜನೆ ಇಂದಿನದಲ್ಲ, ಹತ್ತು ವರ್ಷ ಹಳೆಯದು ಎಂದು ಹೇಳಿ, ವಿವೇಕಾನಂದರು ಪ್ರತಿಪಾದಿಸಿದ ಧರ್ಮದ ಪರಿಕಲ್ಪನೆಯನ್ನು ವಿಶ್ಲೇಷಿಸಿದರು. ಶ್ರೀ ಟಿ.ಎನ್. ಚತುರ್ವೇದಿಯವರು ವಿವೇಕಾನಂದರ ಅಧ್ಯಯನ ಮನುಕುಲವನ್ನು ಮಾರ್ಪಡಿಸುವ ಸಾಮರ್ಥ್ಯ ಹೊಂದಿದೆ; ಜಮ್‌ಶೆಡಜಿ ಟಾಟಾರವರು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿದ್ದರು ; ಈ ಕುರಿತಾಗಿ ಟಾಟಾರವರ ಆತ್ಮಕತೆಯಲ್ಲಿ ಉಲ್ಲೇಖವಿದೆ ಎಂದರು. ಆಶೀರ್ವಚನ ನೀಡಿದ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜರು ಈ ಯೋಜನೆಯ ಹಿನ್ನೆಲೆ ಮತ್ತು ಮುಂದಿನ ಯೋಜನೆಗಳನ್ನು ಸಭೆಗೆ ತಿಳಿಸಿದರು. ಮಾಧ್ಯಮಗಳ ಆಘಾತದಿಂದ ತತ್ತರಿಸುತ್ತಿರುವ ಸಮಾಜಕ್ಕೆ ಸ್ವಾಮಿ ವಿವೇಕಾನಂದರ ವಿಚಾರಗಳೇ ಪರಿಹಾರ ಎಂಬುದನ್ನು ತೋರಿಸಿಕೊಟ್ಟರು. ಶ್ರೀಯುತ ನಂಜುಂಡಯ್ಯ ಎಲ್ಲರನ್ನೂ ವಂದಿಸಿದರು.




ಬೆಂಗಳೂರಿನಲ್ಲಿ ವಿವೇಕಾನಂದ ಪ್ರತಿಮಾ ನಿರ್ಮಾಣ ಸಮಿತಿ ಅಸ್ತಿತ್ವಕ್ಕೆ ಬಂದಿದ್ದು, ಮೂರ್ತಿಯ ಪ್ರತಿಷ್ಠಾಪನೆಯ ಕಾರ್ಯಕ್ಕೆ ಸಿದ್ಧತೆಗಳು ಭರದಿಂದ ಸಾಗಿವೆ.

ರಾಮಕೃಷ್ಣ ಮಿಷನ್, ದೆಹಲಿಯಲ್ಲಿ ಶ್ರೀಮಾತೆಯವರ ಪವಿತ್ರ ಪಾದಚಿಹ್ನೆಗಳ ಸ್ಥಾಪನೆ ಮತ್ತು ನೂತನ ದ್ವಾರದ ಉದ್ಘಾಟನೆಯನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಜುಲೈ ತಿಂಗಳ ೩೦, ಪವಿತ್ರ ಸ್ನಾನಯಾತ್ರಾ ದಿನದಂದು ನೆರವೇರಿಸಿದರು. ಅದರ ಎರಡು ದೃಶ್ಯಗಳು ಕೆಳಗಿವೆ.





## ಕೊಡಗಿನಲ್ಲಿ ಅತಿವೃಷ್ಟಿ ಪರಿಹಾರ

ಇತ್ತೀಚಿನ ಭಾರೀ ಮಳೆಯಿಂದಾಗಿ ಸಂತ್ರಸ್ತಗೊಂಡಿದ್ದ ದಕ್ಷಿಣ ಕೊಡಗಿನ ಜನರ ಸಹಾಯಕ್ಕಾಗಿ ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆಯ ವತಿಯಿಂದ ೩೦೦ ಕಂಬಳಿಗಳನ್ನು ಬಡವರಿಗೆ ವಿತರಿಸಲಾಯಿತು. ಅದಲ್ಲದೆ ಹಳ್ಳಿಯ ಶಾಲಾ ಮಕ್ಕಳಿಗಾಗಿ ೭೦೦ ನೋಟ್ ಪುಸ್ತಕಗಳನ್ನೂ ಮತ್ತು ೧೬೦ ಲೇಖನಿಗಳನ್ನು ನೀಡಲಾಯಿತು.


# OUR SERVICES NOW AT MYSORE

**Out sourcing Accounts, Inventory Dept.**

Part time or full time with complete statutory compliance

**Internal Audit / System Implementation**

Income Tax, TDS, Professional Tax, FBT, TM, Central Excise, Service Tax, PF
ESI, VAT, VAT Refund, ROC, EOU, STPI, SSI, Private Limited Company,
Partnership, Trust, Factories Inspector, Pollution Control, Shops & Establishment

**Payroll: with/ without PF, ESI, PT, TDS**

**Project Finance**

Compiling Project reports/ Liasoning Project Finance

**International Logistics: Sea / Air**

Internal Freight Forwarding & Clearing, Complete Documentation

total solutions™
SMART • ACCURATE • COMPREHENSIVE

**total strategic solutions (India) pvt. ltd.**
**No.598 West, 1st Floor, 1st Cross, Vishwa Manava Double Road, C&D Block, Kuvempu Nagar, Mysore -23; Tel: 4260505, Mobile: 9972039801**
**H.O. Bangalore-08 Tel: 25203730, 41480813 /16**
**Mobile # 9845068263 Fax: 41480452**
**B.O. Pune: 02066204862 Mobile: 09225512083/4**
**Email: total@vsnl.in.**, Visit us at: www.total-sols.com